SATYAVADI Founded 1917 Regd. No. M. 1299

ಸತ್ಯವಾದಿ

(ಆರಮನೆ ಸಿವಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 125 | ಶುವಾರ 11—1—46 | ಬಿಡಿ ಪ್ರತಿ 3 ಪೈ

ಭಾರತದಲ್ಲಿ 12268012000 ರೂ. ನೋಟುಗಳ ಚಲಾವಣೆ

ಮದರಾಸು ಜ 10 — ಭಾರತದ ರಿಜರ್ವ್ ಬ್ಯಾಂಕಿನವರು ಪ್ರಕಟಿಸಿರುವ ಪಟ್ಟಿಯಂತೆ ನಾಲ್ಕನೇ ಜನವರಿಯಲ್ಲಿ ರೂ. 12268012000 ನೋಟುಗಳು ಚಲಾವಣೆಗೆ ಒಂದಿರುವುವೆಂದು ವರ್ಷದ ಹಿಂದೆ ರೂ. 10304622000 ಇದ್ದಿತೆಂದು ಪ್ರಕಟವಾಗಿದೆ. ಅಂದರೆ 197 ಕೋಟಿ ರೂ ನೋಟು ಚಲಾವಣೆ ಹೆಚ್ಚಿದೆ.

ಸುಮಾತ್ರಾದಲ್ಲಿ ಕದನ

ಬಟಾವಿಯಾ ಜ 9— ಉತ್ತರ ಸುಮಾತ್ರಾದಲ್ಲಿ ಇಂಡೋನೇಸಿಯನ್ನರಿಗೂ ಜಪಾನಿಯರಿಗೂ ತೀವ್ರ ಹೊಡೆದಾಟ ನಡೆಯುತ್ತಿರುವುದೆಂದು ಹೇಳಲಾಗಿದೆ.

ದಿನಾಚರಣೆ

ಬೆಂಗಳೂರು— ಈಚೆಗೆ ಇಲ್ಲಿ ಅಜಾದ್ ಹಿಂದ್ ದಿನಾಚರಣೆಯು ವೈಭವದಿಂದ ನಡೆಸಲಾಯಿತು. ಈ ಸಂದರ್ಭದಲ್ಲಿ 3 ಮಂದಿ ಭಾರತೀಯರು ದಸ್ತಗಿರಿ ಮಾಡಲ್ಪಟ್ಟು ಬಿಡಲ್ಪಟ್ಟರು.

ಯಹೂದಿಗಳ ಸಮಸ್ಯೆ

ವಾಷಿಂಗ್ಟನ್ ಡಿ 9— ಪ್ಯಾಲಿಸ್ಟೈನಿನಲ್ಲಿ ಕಡೇಪಕ್ಷ 45 ಮಿಲಿಯ ಡಾಲರು ಗಳಷ್ಟು ಖರ್ಚಿಸಿ ಬಂಡವಾಳ ಉಪಯೋಗಿಸಲಾಗುತ್ತಿದೆಯೆಂದೂ, 110 ಮಿಲಿಯ ಡಾಲರುಗಳಷ್ಟು ಅಮೇರಿಕ ಯಹೂದಿಗಳಿಂದ ದಾನವಾಗಿ ಕಳುಹಿಸಲಾಗಿದೆಯೆಂದೂ ವಿಚಾರಣಾ ಸಮಿತಿಯು ಮುಂದೆ ಹೇಳಲಾಗಿದೆ.

ಲಾಟೀ ಛಾರ್ಜ್

ಕಲ್ಕತ್ತಾ ಜ 9—ಕೇಶವದಾಂ ಪತ್ರಿಕೆಗಿಣಿಯ ಮುಂದೆ ಪಿಕೆಟ್ ಮಾಡುತ್ತಿದ್ದವರ ಮೇಲೆ ಪೋಲೀಸರು ಲಾಟೀ ಛಾರ್ಜ್ ಮಾಡಿದರೆಂದೂ ಆರು ಮಂದಿ ಗಂಡಸರಿಗೂ ಇಬ್ಬರು ಹೆಂಗಸರಿಗೂ ಗಾಯವಾಗಿದೆಯೆಂದೂ ತಿಳಿಯ ಬಂದಿದೆ.

ವೈಸರಾಯರಿಗೆ ಸನ್ಮಾನ

ಅಹಮದಾಬಾದ್ ಜ 8— ವೈಸರಾಯರು ಡೆಲ್ಲಿಯಿಂದ ವಿಮಾನದಲ್ಲಿ ಬಂದು ಇಲ್ಲಿನ ಚಾರಿತ್ರಾರ್ಹವಾದ ಸ್ಥಳಗಳಿಗೆ ಭೇಟಿ ಕೊಟ್ಟರೆಂದೂ, ಐನೂರು ವರ್ಷದ ಪುರಾತನವಾದ ಭದ್ರಾ ಕೋಟೆಯ ಭದ್ರಾದೇವಾಲಯಕ್ಕೆ ಹೋಗಿದ್ದರೆಂದೂ ಆಗ ಅಲ್ಲಿಯ ಮಹಂತರು ವೈಸರಾಯರಿಗೆ ಕೂತುಕೊಳ್ಳಲು ಬೆಳ್ಳಿಯ ಸಿಂಹಾಸನವನ್ನು ಕೊಟ್ಟು ಹಾರ ಹಾಕಿದರೆಂದೂ ತಿಳಿಯಬಂದಿದೆ.

ಕಾಂಗ್ರೆಸ್ ಅಧಿವೇಶನ

ನವದೆಹಲಿ ಜ 9— ಪ್ರಾ ಹು ಶ ಸಮುಂದಿನ ಕಾಂಗ್ರೆಸ್ ಅಧಿವೇಶನವು ಡೆಲ್ಲಿಯಲ್ಲಿ ನಡೆಯಲಾರದೆಂದು ಹೇಳಲಾಗಿದೆ.

ದಿವಾನರ ಪತ್ರಿಕಾ ಸಮ್ಮೇಳನ

ಬೆಂಗಳೂರು ಜ 10—ದಿವಾನರು ಪತ್ರಿಕಾ ಪ್ರತಿನಿಧಿಗಳನ್ನು ಒರಮಾಡಿಕೊಂಡು ಸಂಸ್ಥಾನದಲ್ಲಿನ ಆಹಾರ ಪರಿಸ್ಥಿತಿಯನ್ನೂ ಅಭಾವವಾಗಿರುವುದರ ಬಗ್ಗೆ ಕೈಗೊಂಡಿರುವ ಪರಿಹಾರವನ್ನೂ ತಿಳಿಸಿದರೆಂದೂ ತಿಳಿಯಬಂದಿದೆ.

ಸೈನಿಕರ ನಿವೃತ್ತಿ

ನವದೆಹಲಿ— ಕಳೆದ ನವೆಂಬರು ಮೊದಲಿನಲ್ಲಿ ಸುಮಾರು 85000 ಸೈನಿಕರು ಮತ್ತು ಸ್ತ್ರೀಯರು ಸೈನ್ಯದಿಂದ ನಿವೃತ್ತರಾದರು. ತಿಂಗಳ ಕೊನೆಯಲ್ಲಿ ಒಟ್ಟು 167000 ಜನ ಬಿಡುಗಡೆಯಾದರು.

ಪ್ರಿಯಮಿತ್ರನೊಬ್ಬನಿಗೆ ಅಡ್ವೊಕೇಟ್ ಜನರಲ್ ಪದವಿ. ಸರೋಜಿನಿ ನಾಯ್ಡುರವರ ಅಕ್ರಮ ಪ್ರಯತ್ನ

ಕಾಂಗ್ರೆಸ್ ಹೈಕಮ್ಯಾಂಡಿನವರು ಬರೆದ ಮತ್ತೊಂದು ಪತ್ರವನ್ನು ಇಲ್ಲಿ ಪ್ರಕಟಿಸಲಾಗಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸ್ಯಮುಖ ಸದಸ್ಯರಲ್ಲೊಬ್ಬರು ಶ್ರೀಮತಿ ಸರೋಜಿನಿ ನಾಯ್ಡುರವರು ತಮ್ಮ ಆಪ್ತ ಮಿತ್ರರಾದ ಮಿಸ್ಟರ್ ವಾಲ್ಟರ್ ದತ್‌ರವರಿಗೆ ಅಡ್ವೊಕೇಟ್ ಜನರಲ್ ನೌಕರಿಯನ್ನು ಕೊಡಿಸಲು ಮಧ್ಯಪ್ರಾಂತ್ಯದ ಕಾಂಗ್ರೆಸ್ ಪ್ರಧಾನ ಮಂತ್ರಿ ಡಾ || ಖರೆಯವರಿಗೆ ಬರೆದ ಅಕ್ರಮಪತ್ರದ ಪ್ರತಿಯನ್ನು ಇಲ್ಲಿ ಕೊಡಲಾಗಿದೆ. ಕಾಂಗ್ರೆಸ್ ಮಂತ್ರಿ ಪದವಿಯ ಇತಿಹಾಸವು ಲಂಚಗೊಳಿತನ, ಪಕ್ಷಪಾತ ಅಕ್ರಮವರ್ತನೆಗಳಿಂದ ಕೂಡಿತ್ತೆಂಬುದಕ್ಕೆ ಈ ಪತ್ರವು ಒಂದು ನಿದರ್ಶನ. ಇಂತಹ ನಡತೆಯು "ರಾಷ್ಟ್ರೀಯ ಸಂಸ್ಥೆ" ಯು ಹೆಮ್ಮೆಪಡುವಂತಹದ್ದಲ್ಲವೆಂದು ನಮ್ಮ ಓದುಗರು ಒಪ್ಪುವರು. (ಬೆ)

ಜಾಹೀರ್ ಮಂಜಿಲ್
ರಿಚ್ ಹಿಲ್
ಹೈದ್ರಾಬಾದು, ಡೆಕ್ಕನ್
೨೧ನೇ ಜೂನ್ ೧೯೩೮

ಪ್ರಿಯ ಮಿತ್ರ ಡಾ || ಖರೆಯವರೇ

ಈಗ ಖಾಲಿ ಬಿದ್ದಿರುವ ನ್ಯಾಯಾಧೀಶರ ಸ್ಥಾನಕ್ಕೆ ಈಗ ಅಡ್ವೊಕೇಟ್ ಆಗಿರುವವರನ್ನು ತೆಗೆದುಕೊಂಡಲ್ಲಿ, ತಾತ್ಕಾಲಿಕವಾಗಿ ಅಡ್ವೊಕೇಟ್ ಜನರಲ್ ಸ್ಥಾನಕ್ಕೆ ಹೊಸಬರನ್ನು ನೇಮಿಸುವಿರೆಂದು ಕೇಳಿದ್ದೇನೆ. ನಾನು ಸೂಚಿಸಬಹುದಾದರೆ, ಏ || ವಾಲ್ಟರ್ ದತ್‌ರನ್ನು ನೇಮಿಸಿರೆಂದು ಹೇಳಬಯಸುತ್ತೇನೆ. ಕಳೆದ ಸಾರಿ ಹೈಕೋರ್ಟಿನ ಒಂದು ಸ್ಥಾನಕ್ಕೆ ಅವರ ಹೆಸರನ್ನು ಸೂಚಿಸಲಾಗಿತ್ತು. ಆದರೆ, ನಿಮಗಿಂತ ಹಿಂದೆ ಪ್ರಧಾನಿಯಾಗಿದ್ದವರು ತಮಗೆ ಬೇಕಾದವರನ್ನೇ ನೇಮಿಸಿದರು. ಅವರ ಹೆಸರು ಇಲ್ಲಿ ಅಪಕೃತ.

ಈ ಜವಾಬ್ದಾರಿಯುತವಾದ ಪದವಿಗೆ ಏ || ದತ್‌ರವರು ಸಮರ್ಥರೆಂದು ನೀವು ಭಾವಿಸುವಿರೆಂದು ನಂಬಿದ್ದೇನೆ —

ನಿಮ್ಮ ವಿಶ್ವಾಸಿ,
ಸರೋಜಿನಿ ನಾಯ್ಡು

P S ಆ್ಯಕ್ಟಿಂಗ್ ಜಡ್ಜರ ಸ್ಥಾನವೂ ಖಾಲಿ ಬೇಗ ಬಹುದೆಂದು ನಂಬಿದ್ದೇನೆ.

ರಾಜಧಾನಿಯಲ್ಲಿ ಶಿಶು ಸಪ್ತಾಹ

ಮೈಸೂರು, ಜ 11 — ಮೈಸೂರು ನಗರದ ರೆಡ್‌ಕ್ರಾಸ್ ಸೊಸೈಟಿ ಆಶ್ರಯದಲ್ಲಿ ಜನವರಿ ತಾ || 23 ರಿಂದ 31 ರವರೆಗೆ ಶಿಶು ಸಪ್ತಾಹ ನಡೆಸಲೇರ್ಪಡಿಸಲಾಗಿದೆ. ಈ ಸಂದರ್ಭದಲ್ಲಿ ಮಕ್ಕಳ ಪ್ರದರ್ಶನಗಳು ಬೇರೆ ಬೇರೆ ಸ್ಥಳಗಳಲ್ಲಿ ನಡೆಸಲಾಗುವುದು. ತಾ || 27 ನೇ ಭಾನುವಾರ ಜಾಡಮಾಲಿಗಳ ವಾಸಸ್ಥಾನದಲ್ಲಿ ಜನ್ನಾಗಿಟ್ಟಿರುವ ಮನೆ ಸ್ಪರ್ಧೆ ಏರ್ಪಡಿಸಲಾಗಿದೆ. ತಾ || 30 ರಲ್ಲಿ ಉತ್ತಮ ಶಿಶುಗಳನ್ನು ನಿಷ್ಕರ್ಷಿಸುವುದೂ ತಾ || 31 ರಲ್ಲಿ ಬಹುಮಾನ ವಿನಿಯೋಗವೂ ನಡೆಸಲಾಗುತ್ತದೆ.

ಅಣು ಶಕ್ತಿಯ ಬಗ್ಗೆ ಒಪ್ಪಂದ ಭಿನ್ನಾಭಿಪ್ರಾಯವಿಲ್ಲ

ಅಣು ಶಕ್ತಿಯ ನಿರ್ಣಯದ ಬಗ್ಗೆ ಚತುರ್ವಿಧ ರಾಷ್ಟ್ರಗಳಲ್ಲಿ ಭಿನ್ನಾಭಿಪ್ರಾಯವೇನೂ ಇಲ್ಲವೆಂದೂ ಆ ಒಗ್ಗೆ ಒಪ್ಪಂದವಾಗಿರುವುದಾಗಿಯೂ ಅನಿರೀಕ್ಷಿತ ಕಾರ್ಯದರ್ಶಿ ಬೈರನ್ಸರು ಹೇಳಿದ್ದಾರೆ.

ಶ್ರೀಮಹಾರಾಜರವರು ಚಿಂತಾಮಣಿಗೆ ಅನಿರೀಕ್ಷಿತ ಭೇಟಿಯಿತ್ತು ಪ್ರಜಾ ಪರಿಸ್ಥಿತಿಯನ್ನು ಮುದ್ದು ನಿಚಾರ ಮಾಡಿದರು.

ವಿವಿಧ ವೃತ್ತ

ಗಾಜೀಪುರದ ಪಾರಸಭಾ ಚುನಾವಣೆಯಲ್ಲಿ ಮೂವರು ಕಾಂಗ್ರೆಸಿನ ಉಮೇದುವಾರರು ತಮ್ಮ ತೇವಣಿಯನ್ನು ಕಳೆದು ಕೊಂಡರು (ಬಿ)

ವಾರ್ಚ್ ತಿಂಗಳಲ್ಲಿ ಭಾರತಕ್ಕೆ ಭಾರತ ಕಾರ್ಯದರ್ಶಿ ಪೆಥಿಕ್ ಲಾರೆನ್ಸರು ಭೇಟಿ ಕೊಡಬಹುದಾಗಿ ತಿಳಿಯ ಬಂದಿದೆ.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವ್ಯಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕ್ವಾಲು ಪೌಂಡು ಮತ್ತು ಒಂದು ಸೇರು ನಿತ್ಯಕಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

• ನಮ್ಮ ಸುಖಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಹಿಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಬಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಇಂಡೋನೇಷಿಯಾ ವಿಚಾರ

ಇಂಡೋನೆಷಿಯವರು ಮಧ್ಯ ಏಷ್ಯಾ ಜನಾಂಗಗಳಿಂದ ನಿರಾಶ್ರಿತರನ್ನು ಸೌಕರ್ಯವಾಗಿ ಸಾಗಿಸಲು ಏರ್ಪಡಿಸಿದ್ದಾರೆ. ಇಂಡೋನೇಷಿಯಾ ಮುಖ್ಯ ಮಂತ್ರಿ ಡಾ || ಹೆಹರಿಯಾರವರು ಡಾ || ಸೋಕರ್ನೋರವರ ಜೊತೆ ಸಂಭಾಷಣೆ ನಡೆಸಿ ಬಟಾವಿಯಾಕ್ಕೆ ವಾಪಸ್ ಬಂದರು

At Ranjit
From 11-1-46
Vish Kanya

ಧನ ಬೋಸ್, ಪೃಥ್ವಿರಾಜ್

ಸುರೇಂದ್ರ ಗಾತ್ರ ಸಹಿಸಿರುವ

ವಿಷಕನ್ಯ

ಹರ್ಷ ಬೆಟ್ಟದಪುರದ ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

ಸತ್ಯವಾದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಒರೆಯಿರಿ. ಅಂಚೆ ವೆಚ್ಚ ಸೇರಿ ಸರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ, ಚಾಮರಾಜಪುರಂ, ಮೈಸೂರು

ಮೈಸೂರು ಸಿಟಿ ರೇಷನಿಂಗ್

ನೋಟಿಫಿಕೇಷನ್

No. R I- 60/45-46

ಮೈಸೂರು ಸಿಟಿಯುಲ್ಲಿರುವ ಎಲ್ಲಾ ಸರ್ಕಾರಿ ರೇಷನ್ ಡಿಪೋಗಳು, ಪೊಹಲ್ಲಾ ಸಬ್ ಗೋಡೌನ್‌ಗಳು ಮತ್ತು ಇತರೆ ರೇಷನ್ ಡಿಪೋಗಳು ಸಹಾ ಇದೇ ಮಾಹೆ 14 ನೇ ತಾರೀಖು ಸೋಮವಾರ ಮಧ್ಯಾಹ್ನ 'ಉತ್ತರಾಯಣ ಪುಣ್ಯ ಕಾಲ' ದ ಪ್ರಯುಕ್ತ ಮುಚ್ಚಲ್ಪಡುತ್ತವೆ.

(ಸಹಿ) ಎಸ್. ಎನ್. ಸುಬ್ರಹ್ಮಣ್ಯಂ

ರೇಷನಿಂಗ್ ಆಫೀಸರ್ ಇನ್ ಛಾರ್ಜ್

4-1-46 ಮೈಸೂರು ಸಿಟಿ

At Opera — 4 ನೇ ವಾರ

ತ್ಯಾಗರಾಜ ಭಾಗವತರ್ — ನಾಗಯ್ಯ — ಕನ್ನಾಂಬಾ

ಪಾತ್ರವಹಿಸಿರುವ

ಅಶೋಕ ಕುಮಾರ (ತಮಿಳು)

L. N. Press

Sriramp.t MYSORE

For Good Printing

Edited, Printed and published by M. S. Krishna Rao, at the Satyavadi Press, Chamaraja Agrahar, Mysore

ರಕ್ತವರ್ಧಿಗೆ – ಧಾತುಪುಷ್ಟಿಗೆ ಸಂಜೀವನ

ಅ ಕಿ ಸು ಧಾ

ಬೆಲೆ ಪಚ್ಚಿ ೧ ಕ್ಕೆ ಒಂದು ರೂಪಾಯಿ.

ವಿಳಾಸ — ರತ್ನಸುಧಾ, ೧೦೬೭ ಜಾಹಗೀರ್‌ದಾರ್, ಮೈಸೂರು